# ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಅಪರಾಧ ಮೊಕದ್ದಮೆ ಸಂಖ್ಯೆ:1688/2025

**ಪಿರ್ಯಾದುದಾರರು:-** ಆನಂದಪುರ ಪೊಲೀಸ್

ವಿರುದ್ಧ

**ಆರೋಪಿತರು:-** ಎ 1) ಶಿವಕುಮಾರ ಬಿನ್ ಮಂಜಪ್ಪ,
ಸುಮಾರು 45 ವರ್ಷ,
ಗೌತಮಪುರ ಗ್ರಾಮ ವಾಸ,
ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

## ದೋಷಾರೋಪಣೆ

ಸಾಗರದ ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಧೀಶರಾದ ಶ್ರೀ ನಟರಾಜ್ ಯಾದವ್ ಎಸ್, ಎಮ್.ಬಿ.ಎ., ಎಲ್.ಎಲ್.ಬಿ., ಆದ ನಾನು ನಿಮ್ಮ ಮೇಲೆ ಈ ಕೆಳಗಿನಂತೆ ಆರೋಪಣೆ ಹೊರಿಸುತ್ತೇನೆ:

ದಿನಾಂಕ:28.05.2025 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಸಾಗರ ತಾಲ್ಲೂಕು ಗೌತಮಪುರ ಗ್ರಾಮದ ಗೌತಮಪುರ ಗ್ರಾಮ ಪಂಚಾಯ್ತಿ ಕಛೇರಿಯ ಸಭಾಭವನದಲ್ಲಿ, ಸಾಮಾನ್ಯ ಸಭೆ ಸಮಯದಲ್ಲಿ ಗ್ರಾಮ ಪಂಚಾಯಿತಿ ಸದಸ್ಯೆ ಆಗಿರುವ ಚಾಸಾ-01 ರವರು ಕುಡಿಯುವ ನೀರಿನ ಕಾಮಗಾರಿ ಬಗ್ಗೆ ಚರ್ಚೆ ಮಾಡುತ್ತಿದ್ದಾಗ ಆರೋಪಿಯಾದ ನೀವು ಚಾಸಾ-01 ರವರಿಗೆ ನೀನ್ಯಾವಳೇ ಕೇಳೋದಿಕ್ಕೆ ನಿಮ್ಮಪ್ಪನ ಮನೆ ದುಡ್ಡಾ ಅಂತ ಅವಾಚ್ಯವಾಗಿ ನಿಂದಿಸಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ. 352 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದು, ಅದು ನನ್ನ ಸಂಜ್ಞೆಯಲ್ಲಿ ಇದೆ.

ಎರಡನೇಯದಾಗಿ ಮೇಲ್ಕಂಡ ದಿನಾಂಕ, ಸಮಯ, ಸ್ಥಳದಲ್ಲಿ ಮೇಲ್ಕಂಡ ವಿಚಾರವಾಗಿ ಆರೋಪಿಯಾದ ನೀವು ಚಾಸಾ.1 ರವರ ಕೈ ಹಿಡಿದು ಎಳೆದಾಡಿ ಮಾನಕ್ಕೆ ಕುಂದುಂಟು ಮಾಡಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ. 74 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದು, ಅದು ನನ್ನ ಸಂಜ್ಞೆಯಲ್ಲಿ ಇದೆ.

ಕೊನೇಯದಾಗಿ ಮೇಲ್ಕಂಡ ದಿನಾಂಕ, ಸಮಯ, ಸ್ಥಳದಲ್ಲಿ ಮೇಲ್ಕಂಡ ವಿಚಾರವಾಗಿ ಆರೋಪಿಯಾದ ನೀವು ಚಾಸಾ.1 ರವರಿಗೆ ಕುತ್ತಿಗೆಗೆ ಕೈಹಾಕಿ, ಕೈಯಿಂದ ಎದೆಯ ಭಾಗಕ್ಕೆ ಗುದ್ದಿ,

ಎಡಗೈ ಮಣಿಕಟ್ಟಿನ ಹತ್ತಿರ ಗಾಯಪಡಿಸಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ. 115(2) ಮತ್ತು 131 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದು, ಅದು ನನ್ನ ಸಂಜ್ಞೆಯಲ್ಲಿ ಇದೆ.

**(ದಿ:16.10.2025 ರಂದು ಆರೋಪಿಯಿಂದ ನೀಡಲ್ಪಟ್ಟಿದೆ ಎಂದು ಪ್ರಮಾಣೀಕರಿಸಿದೆ).**

**ಆದ್ದರಿಂದ ನಿಮ್ಮ ಮೇಲೆ ಮುಂದಿನ ಕೇಸು ನಡೆಸುವಂತೆ ನಿರ್ದೇಶಿಸಿದೆ.**

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು
**ಮತ್ತು ಜೆ.ಎಂ.ಎಫ್.ಸಿ., ಸಾಗರ.**